# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-1690/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರವೀಂದ್ರ ಪೈ, ಅಂಬಾಗಿಲು, ಉಪ್ಪುಂದ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರವೀಂದ್ರ ಪೈ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 50ರ ಗಡಿ ಗುರುತಿಸುವ ಸಂಬಂಧ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಕುಂದಾಪುರ ಇವರ ಸೂಚನೆಯಂತೆ ದಾಖಲೆಗಳು ಇಲ್ಲದ ಉಪ್ಪುಂದದ ಶಾಲೆ ಬಾಗಿಲು ಕ್ರಾಸ್‌ನಿಂದ ಕಂಬೇಕಾನ ಕ್ರಾಸ್‌ವರೆಗೆ ಹಾದು ಹೋಗುವ ಹಳೆಯ ರಸ್ತೆಯ ಗಡಿ ಗುರುತಿಸುವ ಕೆಲಸವನ್ನು ದಿ: 15/10/2013 ರಂದು ಮಾಡಿರುವುದಾಗಿ ಎದುರುದಾರರು ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತಾರೆ. ಗಡಿ ಗುರುತಿಸುವ ಕೆಲಸವನ್ನು ಕೈಗೊಂಡಿದ್ದಲ್ಲಿ, ಸದರಿ ರಸ್ತೆಯ ಇಕ್ಕೆಲುಗಳಲ್ಲಿ ಇರುವ ಜಮೀನು ಮಾಲೀಕರುಗಳಿಗೆ ನೋಟೀಸ್ ನೀಡಬೇಕಾಗಿದ್ದು, ಆದರೆ, ನೋಟೀಸ್ ನೀಡದೇ ಗಡಿ ಗುರುತಿಸುವ ಕೆಲಸವನ್ನು ನಿರ್ವಹಿಸಿರುವುದಾಗಿ ಕಂಡು ಬರುತ್ತದೆ. ಎದುರುದಾರರು ಇತರೆ ವ್ಯಕ್ತಿಗಳೊಡನೆ ಸೇರಿ ಬೇಕಾಬಿಟ್ಟಿ ಗಡಿ ಕಲ್ಲುಗಳನ್ನು ನೆಟ್ಟಿದ್ದು, ಇದರಿಂದ, ಆಂತಕಕಾರಿ ವಾತಾವಾರಣ ಸೃಷ್ಟಿಯಾಗಿರುತ್ತದೆ. ಏತನ್ಮಧ್ಯೆ ಸದರಿ ರಸ್ತೆಗೆ ಸಂಬಂಧಿಸಿದಂತೆ ಈಗಾಗಲೇ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:31176-31179/2015 ರ ಪ್ರಕರಣವು ವಿಲೇಗೆ ಬಾಕಿ ಇದ್ದಾಗಲೇ ಎದುರುದಾರರು ಸರ್ವೇ ಕಾರ್ಯ ನಿರ್ವಹಿಸಿರುತ್ತಾರೆ. ಎದುರುದಾರರು ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರೊಡನೆ ಶಾಮೀಲಾಗಿ ಈ ರೀತಿ ಸರ್ವೇ ಕೆಲಸ ಮಾಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಹಾಗೂ ಎದುರುದಾರರು ಸರ್ವೇ ಕಾರ್ಯ ನಿರ್ವಹಿಸಿ ಕೆಲಸ ನಿರ್ವಹಿಸಿದ್ದಲ್ಲಿ, ಸದರಿ ವರದಿಯನ್ನು ನೀಡುವಂತೆ ತಿಳಿಸಿ ಎದುರುದಾರರಿಗೆ ಪತ್ರ ಬರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ತಾನು ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 50ರ ಸರ್ವೇ ಕಾರ್ಯವನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ಕುಂದಾಪುರ ಇವರ ಕೋರಿಕೆ ಮೇರೆಗೆ ಸರ್ವೇ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಸದರಿ ಸರ್ವೇ ಕಾರ್ಯವನ್ನು ಎಫ್‌ಎಂಬಿ ಯಂತೆ ಅದರಲ್ಲಿರುವ ಅಳತೆಗಳನ್ನು ಪರಿಶೀಲಿಸಿ ಸರ್ವೇ ಕಾರ್ಯ ನಿರ್ವಹಿಸಲಾಗಿರುತ್ತದೆ. ಸರ್ವೇ ಮಾಡುವ ಬಗ್ಗೆ ಸರ್ವೇಯ ಪೂರ್ವದಲ್ಲಿ ಸಂಬಂಧಪಟ್ಟ ಜಮೀನಿನ ಮಾಲೀಕರಿಗೆ ನೋಟೀಸ್‌ಅನ್ನು ನೀಡಲಾಗಿರುತ್ತದೆ ಎಂದು ಆದರೆ, ಕೆಲವು ನೋಟೀಸ್‌ಗಳು ಜಾರಿಯಾಗದೆ ಹಿಂದಿರುಗಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ದೂರುದಾರರು ಅಥವಾ ಅವರಿಗೆ ಸಂಬಂಧಿಸಿದ ವ್ಯಕ್ತಿಗಳಾಗಲೀ ಎದುರುದಾರರು ನಡೆಸಿದ ಸರ್ವೇ ಬಗ್ಗೆ ಅನುಮಾನವಿದ್ದಲ್ಲಿ ಅಥವಾ ಸರ್ವೇ ವರದಿಯು ಅವರಿಗೆ ತೃಪ್ತಿಕರವಾಗದೇ ಇದ್ದಲ್ಲಿ, ಸದರಿ ಸರ್ವೇ ವರದಿಯ ಮೇಲೆ ಮೇಲ್ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ. ಆದ್ದರಿಂದ, ಎದುರುದಾರರು ತಮ್ಮ ಮೇಲೆ ಮಾಡಿರುವ ಆರೋಪಗಳು ನ್ಯಾಯಸಮ್ಮತವಲ್ಲವೆಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಮೇಲೆ ಹೇಳಿದಂತೆ ರಸ್ತೆಯ ಸರ್ವೇ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಸಂಬಂಧಪಟ್ಟ ಜಮೀನಿನ ಮಾಲೀಕರುಗಳಿಗೆ ನೋಟೀಸ್ ನೀಡಬೇಕಾಗಿದ್ದು, ಎದುರುದಾರರು ತಾವು ನೋಟೀಸ್ ಅನ್ನು ನೀಡಿರುವುದಾಗಿ ಮತ್ತು ನೀಡಿದ ನೋಟೀಸ್‌ಗಳಲ್ಲಿ ಕೆಲವು ನೋಟೀಸ್‌ದಾರರ ನೋಟೀಸ್‌ಗಳು ಜಾರಿಯಾಗದೇ ಹಿಂದಿರುಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಅಂತಹ ಸಂದರ್ಭದಲ್ಲಿ ತಮ್ಮ ಜಮೀನಿನಲ್ಲಿ ಸದರಿ ನೋಟೀಸ್ ಅನ್ನು ಗೋಡೆಗೆ ಅಂಟಿಸಿ ಬರಬಹುದಾಗಿತ್ತೆಂದು, ಆದರೆ, ಆ ರೀತಿ ನೋಟೀಸ್ ಅನ್ನು ಜಾರಿ ಮಾಡಲು ಪ್ರಯತ್ನಿಸಿರುವುದು ಕಂಡು ಬರುವುದಿಲ್ಲವೆಂದು ಮತ್ತು ಎದುರುದಾರರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು, ದೂರುದಾರರ ಪ್ರತ್ಯುತ್ತರವನ್ನು ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ರಿಟ್ ಪೆಟೀಷನ್ ಡಬ್ಲ್ಯೂಪಿ ನಂಬರ್:31176-31179/2015 ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಧೀಕ್ಷಕ ಅಭಿಯಂತರರು,

ಲೋಕೋಪಯೋಗಿ ಇಲಾಖೆ, ಮಂಗಳೂರು ಹಾಗೂ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ಇವರುಗಳನ್ನೊಳಗೊಂಡಂತೆ ಸರ್ಕಾರದ ವಿರುದ್ಧ ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಎದುರುದಾರರು ದೂರುದಾರರ ಮನೆಯ ಮುಂದೆ ಕಾಂಕ್ರೀಟ್ ಸಿಸಿ ರಸ್ತೆಯನ್ನು ನಿರ್ಮಿಸಿದ್ದು, ಸದರಿ ಸಿಸಿ ರಸ್ತೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿರುತ್ತದೆ. ಸದರಿ ರಸ್ತೆಗೆ ಇಕ್ಕೆಲುಗಳಲ್ಲಿ ಮಳೆ ನೀರು ಹರಿದು ಹೋಗಲು ಚರಂಡಿಯನ್ನು ನಿರ್ಮಿಸಿರುವುದಿಲ್ಲ ಎಂದು ತಿಳಿಸಿದ್ದು, ಈ ಬಗ್ಗೆ ಮಾನ್ಯ ನ್ಯಾಯಾಲಯವು ರಸ್ತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ 3 ವಾರದಲ್ಲಿ ತೀರ್ಮಾನವನ್ನು 2 ಮತ್ತು 3ನೇ ಎದುರುದಾರರು ಕೈಗೊಂಡು ಸದರಿ ರಸ್ತೆಯನ್ನು ಸರಿಪಡಿಸುವಲ್ಲಿ ಕೆಲಸವನ್ನು ತಕ್ಷಣವೇ ಕೈಗೊಳ್ಳಬೇಕೆಂದು ಆದೇಶ ನೀಡಿರುವುದು ಕಂಡು ಬಂದಿರುತ್ತದೆ (ಸದರಿ ತೀರ್ಪಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ತೀರ್ಪಿನ ಆಧಾರದ ಮೇಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ನಂ.2ನೇ ಉಪವಿಭಾಗ, ಕುಂದಾಪುರ ಇವರು ಬೈಂದೂರಿನ ತಹಶೀಲ್ದಾರ್‌ರವರಿಗೆ ಪತ್ರ ಬರೆದು, ಅಂಬಾಗಿಲು-ಹಳೆ ಎಂಬಿಸಿ ರಸ್ತೆಯನ್ನು ಸಂಪೂರ್ಣವಾಗಿ ಸರ್ವೇ ಮಾಡಿ ಗಡಿ ಗುರುತಿಸುವುದು ಅವಶ್ಯವಿರುತ್ತದೆ. ಆದ್ದರಿಂದ, ಒಬ್ಬ ಸರ್ವೇಯರ್‌ಅನ್ನು ತಮ್ಮ ಕಛೇರಿಗೆ ನಿಯೋಜಿಸಿ ಗಡಿ ಗುರುತಿಸಲು ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸರ್ವೇಯರ್ ಆದ ಎದುರುದಾರರು ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 50ರ ಗಡಿ ಗುರುತಿಸುವಿಕೆಗೆ ಸಂಬಂಧಿಸಿದಂತೆ ಅಳತೆ ಕಾರ್ಯವನ್ನು ದಿ:09/09/2015 ರಂದು ಕೈಗೊಳ್ಳಲಾಗುವುದೆಂದು ತಿಳಿಸಿ ನೋಟೀಸ್ ನೀಡಿರುತ್ತಾರೆ (ಸದರಿ ನೋಟೀಸ್‌ನ ಪ್ರತಿಯನ್ನು ಹಾಜರುಪಡಿಸಲಾಗಿದೆ). ದಿ:09/09/2015 ಕ್ಕೆ ಸರ್ವೇ ಕಾರ್ಯ ನಿಗಧಿಪಡಿಸಲಾಗಿದ್ದು, ಕಾರಣಾಂತರಗಳಿಂದ ಸದರಿ ಸರ್ವೇ ಕಾರ್ಯವನ್ನು ಮೂಂದೂಡಲಾಗಿದೆ ಎಂದು ತಿಳಿಸಿ ನೋಟೀಸ್ ನೀಡಿರುತ್ತಾರೆ (ಸದರಿ ನೋಟೀಸ್ ಅನ್ನು ಹಾಜರುಪಡಿಸಲಾಗಿದೆ). ಇದಾದ ನಂತರ ದಿ:15/10/2015 ರಂದು ಸರ್ವೇ ಕಾರ್ಯ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ನೀಡಿರುತ್ತಾರೆ (ನೋಟೀಸ್‌ಗಳ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ನೋಟೀಸ್ ಪ್ರತಿಗಳನ್ನು ಪರಿಶೀಲಿಸಿದಲ್ಲಿ, ದೂರುದಾರರಿಗೆ ನೋಟೀಸ್ ನೀಡಿರುವುದು ಕಂಡು ಬರುವುದಿಲ್ಲ. ಎದುರುದಾರರು ಮೇಲೆ ಹೇಳಿದ ಸರ್ವೇ ನಂಬರ್ 172 ಕ್ಕೆ ಸಂಬಂಧಿಸಿದಂತೆ ಸರ್ವೇ ಮಾಡಿ ನಕಾಶೆಯನ್ನು ನೀಡಿದ್ದು, ಸದರಿ ನಕಾಶೆಯನ್ನು ಹಾಜರುಪಡಿಸಲಾಗಿದೆ. ಸದರಿ ನಕಾಶೆಯಲ್ಲಿ ಸರ್ವೇ ನಂಬರ್ 172 ರಲ್ಲಿ ಸರ್ವೇ ನಂಬರ್ 173, 185, 204, 205 ಮತ್ತು 171ರ ಹಿಡುವಳಿದಾರರು 0.10.5 ಎಕರೆ ಪ್ರದೇಶವನ್ನು ಒತ್ತುವರಿ ಮಾಡಿರುತ್ತಾರೆಂದು ತೋರಿಸಿರುತ್ತಾರೆ. ಸದರಿ ಸರ್ವೇ ಕಾರ್ಯ ಮುಗಿದ ನಂತರ ವಿಶೇಷ ತಹಶೀಲ್ಧಾರ್ ಬೈಂದೂರು ಇವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ನಂ.2 ಉಪವಿಭಾಗ, ಕುಂದಾಪುರ ಇವರಿಗೆ ಪತ್ರ ಬರೆದು ಸರ್ವೇ ಕಾರ್ಯವನ್ನು ಕೈಗೊಂಡು

ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 50ರ ಹದ್ದುಬಸ್ತನ್ನು ಮಾಡಲಾಗಿದೆ ಎಂದು ತಿಳಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಮೇಲೆ ಹೇಳಿದ ಸರ್ವೇ ನಂಬರ್ 50 ಮತ್ತು 172ರ ರಸ್ತೆ ಇಕ್ಕೆಲುಗಳಲ್ಲಿ ಇರುವ ನೋಟೀಸ್ ನೀಡದ ಹಿಡುವಳಿದಾರ ಪಟ್ಟಿಯನ್ನು ನೀಡಿರುತ್ತಾರೆ. (ಸದರಿ ಪಟ್ಟಿಯನ್ನು ಹಾಜರುಪಡಿಸಲಾಗಿದೆ).

5. ಈ ಎಲ್ಲ ಅಂಶಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 150ರ ರಸ್ತೆಯ ಸರ್ವೇ ಕಾರ್ಯವನ್ನು ಕೈಗೊಳ್ಳುವ ಪೂರ್ವದಲ್ಲಿ ಸಂಬಂಧಪಟ್ಟ ಎಲ್ಲ ಹಿಡುವಳಿದಾರರಿಗೆ ನೋಟೀಸ್ ನೀಡಲಾಗಿಲ್ಲವೆಂಬುದು ಕಂಡು ಬರುತ್ತದೆ. ಕೆಲವು ಹಿಡುವಳಿದಾರರಿಗೆ ನೋಟೀಸ್ ನೀಡಿದ್ದಾಗ್ಯೂ ಅದು ತಲುಪದೇ ಇರುವ ಬಗ್ಗೆ ಎದುರುದಾರರು ಒಪ್ಪಿರುತ್ತಾರೆ. ಆದ್ದರಿಂದ, ಸರ್ವೇ ಕಾರ್ಯವನ್ನು ಎದುರುದಾರರು ಸರಿಯಾಗಿ ನೋಟೀಸ್ ನೀಡಿ ಕೈಗೊಂಡಿಲ್ಲವೆಂಬುದು ಕಂಡು ಬರುತ್ತದೆ.

**6.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಉಪ್ಪುಂದ ಗ್ರಾಮದ ಸರ್ವೇ ನಂಬರ್ 172 ಮತ್ತು 50ರ ಗಡಿ ಗುರುತಿಸುವ ಸಂಬಂಧ, ಸರಿಯಾದ ರೀತಿಯಲ್ಲಿ ಹಾಗೂ ನ್ಯಾಯಯುತವಾದ ರೀತಿಯಲ್ಲಿ ಸರ್ವೇ ಕಾರ್ಯವನ್ನು ಕೈಗೊಂಡು ಗಡಿ ಗುರುತಿಸಿ ನಂತರ, ರಿಟ್ ಪೆಟೀಷನ್ ಡಬ್ಲ್ಯೂಪಿ ನಂಬರ್:31176-31179/2015 ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸಿಸಿ ರಸ್ತೆಯನ್ನು ವೈಜ್ಞಾನಿಕವಾಗಿ ನಿರ್ಮಿಸಲು/ಸರಿಪಡಿಸಲು ಕ್ರಮ ಕೈಗೊಳ್ಳಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 25/5/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 25/5/17